ನಿಯಮಗಳನ್ನು ಬಹಳಷ್ಟು ಉದಾರಗೊಳಿಸಿದರು. ತನ್ಮೂಲಕ ಮಂತ್ರದ ಮಹಿಮೆಯನ್ನು ಮತ್ತೂ ಪ್ರಕಾಶಮಾನಗೊಳಿಸಿದರು. ಅವರು ಹಾಕಿದ ನಿಯಮವೊಂದೇ – ಭಗವಂತ ಬೇಕು ಎನ್ನುವ ಉತ್ಕಟ ವ್ಯಾಕುಲತೆ ಇರಬೇಕು. ಅವತಾರಿಣಿಯಾಗಿ ಶ್ರೀಮಾತೆಯವರು ಇನ್ನೊಂದು ಮಾತನ್ನು ಹೇಳುತ್ತಾರೆ, ಯಾವುದೇ ದೇವ ದೇವತೆಗಳ ಪೂಜೆ ಹಾಗೂ ನೈವೇದ್ಯವನ್ನು ಮಾಡುವಾಗಲೂ ಪೂಜಾಸಂಬಂಧಿಯಾದ ಆಯಾ ಮಂತ್ರಗಳು ಬರದಿದ್ದರೂ ತೊಂದರೆಯಿಲ್ಲ, ಗುರು ಉಪದೇಶಿಸಿದ ಇಷ್ಟಮಂತ್ರವನ್ನೇ ಹೇಳುತ್ತ, ಭಗವಂತನಿಗೆ ''ಇಲ್ಲಿ ಬಾ, ಇಲ್ಲಿ ಕುಳಿತುಕೋ, ನನ್ನ ಪೂಜೆಯನ್ನು ಸ್ವೀಕರಿಸು'' ಎಂದು ಹೇಳಬೇಕಂತೆ. ಅವರ ಪ್ರಕಾರ ಪೂಜೆ ನೈವೇದ್ಯಾದಿಗಳಲ್ಲಿ ಮಂತ್ರವಲ್ಲ, ಭಾವ ಮುಖ್ಯವಾದದ್ದು. ಜಪಸಾಧನೆಯೇ ಆ ಭಾವವಿಕಾಸಕ್ಕೆ ನೆರವನ್ನು ನೀಡುವಾಗ ಪೂಜಾದಿ ಇತರ ಸಾಧನೆಗಳು ಇದ್ದರೂ ಸರಿ, ಇಲ್ಲದಿದ್ದರೂ ಸರಿ ಎಂಬುದು ಶ್ರೀಮಾತೆಯವರ ಅಭಿಮತ.

### ಜಪಸಾಧನೆಯಲ್ಲಿ ಸಾಧಕನು ಗಮನಿಸಬೇಕಾದ ಅಂಶಗಳಾವುವು?

೧. ಪ್ರತಿದಿನ ಜಪಕ್ಕೆ ಒಂದು ನಿಶ್ಚಿತ ಸಮಯವನ್ನು ಇಟ್ಟುಕೊಂಡಿದ್ದರೆ ಒಳಿತು, ಬೆಳಿಗ್ಗೆ ಮತ್ತು ಸಾಯಂಕಾಲ ಸೂಕ್ತವಾದ ಸಮಯ. ಒಂದು ವೇಳೆ ಆ ನಿಶ್ಚಿತ ಸಮಯದಲ್ಲಿ ಜಪ ಮಾಡಲಾಗದಿದ್ದರೂ ಜಪವನ್ನು ಬಿಟ್ಟುಬಿಡದೆ ಬೇರೊಂದು ಸಮಯದಲ್ಲಿ ಮಾಡಬೇಕು.

೨. ಭಗವತ್ಪ್ರಾಪ್ತಿ ನಮ್ಮ ಗುರಿಯಾಗಿರುವಾಗ ಪ್ರಾಣಾಯಾಮ, ಯೋಗಾಸನಾದಿಗಳ ಕಡೆಗೆ ನಾವು ಎಷ್ಟು ಬೇಕೋ ಅದಕ್ಕಿಂತ ಹೆಚ್ಚಿನ ಗಮನವನ್ನು ಕೊಡಬೇಕಿಲ್ಲ. ಅವುಗಳ ಕಡೆಗೆ ಅತಿ ಗಮನವನ್ನು ಕೊಟ್ಟರೆ ಮನಸ್ಸು ದೇಹಬುದ್ಧಿಯನ್ನು ತಾಳುವ ಅಪಾಯವಿರುತ್ತದೆ.

೩. ನಿರಂತರ ಮಾಡುವ ಜಪದಿಂದ ಕರ್ಮಪಾಶ ಕಳಚುತ್ತದೆ ಎಂಬುದೇನೋ ನಿಜ, ಆದರೆ ಪ್ರೇಮವಿಲ್ಲದೆ ಭಗವಂತನನ್ನು ಪಡೆಯಲಾಗುವುದಿಲ್ಲ. ಬೃಂದಾವನದ ಗೋಪಗೋಪಿಯರು ಜಪ–ಧ್ಯಾನದಿಂದಲ್ಲ, ಸರಳ ಪ್ರೇಮದಿಂದ ಕೃಷ್ಣನನ್ನು ಒಲಿಸಿಕೊಂಡಿದ್ದು.

೪. ಗಾಳಿ ಬೀಸುವುದರಿಂದ ದೀಪ ಅಲುಗಾಡುವಂತೆ ಆಶೆಗಳಿಂದ ಮನಸ್ಸು ಚಂಚಲವಾಗುತ್ತದೆ. ಚಂಚಲ ಮನಸ್ಸು ಜಪವನ್ನು ಹೃತ್ಪೂರ್ವಕವಾಗಿ ಮಾಡಲಾರದು. ಆದ್ದರಿಂದ ಆಶೆಗಳು ಕಡಿಮೆಯಾದಷ್ಟು ಜಪ ಸುಲಭವಾಗುತ್ತದೆ.

೫. ಜಪ ಮಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಒಂದೇ ಸಮನೆ ಜಪ ಮಾಡುವುದನ್ನು ಅಭ್ಯಾಸ ಮಾಡಿಕೊಂಡರೆ ಮನುಷ್ಯ ಭಗವಂತನನ್ನೇ ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ನಿರಂತರ ನಾಮಸ್ಮರಣೆಯ ಅಭ್ಯಾಸ ಎಲ್ಲವನ್ನೂ ತಂದುಕೊಡುತ್ತದೆ. ಮತ್ತೇನನ್ನೂ ಮಾಡ ಬೇಕಾಗಿಲ್ಲ, ಅಭ್ಯಾಸಕ್ಕೆ ಸ್ವಲ್ಪ ಅಂಟಿಕೊಂಡರೆ ಸಾಕು, ಎಷ್ಟು ಆನಂದ ಸಿಗುತ್ತದೆ!

ಆರಂಭದ ಸಾಧಕರಿಗೆ ಶ್ರೀಮಾತೆಯವರು ಹೇಳುತ್ತಾರೆ, ''ಮನಸ್ಸು ಒಂದು ಕಡೆ ಇರಲಿ ಅಥವಾ ಬಿಡಲಿ, ಜಪವನ್ನಂತು ಮಾಡು. ಪ್ರತಿದಿನ ಒಂದು ಗೊತ್ತಾದ ಸಂಖ್ಯೆಯಲ್ಲಿ ಜಪವನ್ನು ಮಾಡುವುದರಿಂದ ನಿನಗೆ ಒಳ್ಳೆಯದಾಗುತ್ತದೆ, ಆದರೆ ಮುಂದುವರಿದಂತೆ ಕ್ರಮೇಣ ಮನಸ್ಸು ಭಗವಂತನ ರೂಪದಲ್ಲಿ ಒಂದಾಗಬೇಕು, ಮನಸ್ಸು ಸ್ಥಿರವಾಗಬೇಕು. ಆರಂಭದಲ್ಲಿ ಅಂತಹ ಭಕ್ತಿಯೇನೂ ಇಲ್ಲದಿದ್ದರೂ ಭಗವಂತನ ನಾಮಜಪವನ್ನು ಮಾಡಬೇಕು. ಅದರಿಂದ ಪ್ರಯೋಜನವಿದೆ. ನೀರಿನಲ್ಲಿ ನಾವಾಗಿ ಬಿದ್ದರೂ ಅಥವಾ ಇನ್ನೊಬ್ಬರು ತಳ್ಳಿದರೂ ನಮ್ಮ ಬಟ್ಟೆ ಒದ್ದೆ ಆಗಿಯೇ ಆಗುತ್ತದೆ. ಆದರೆ ಕ್ರಮ ಕ್ರಮೇಣ ಒಂದೇ ಮನಸ್ಸಿನಿಂದ ಪ್ರೀತಿಯಿಂದ ಧ್ಯಾನವನ್ನು ಮಾಡಲು ಕಲಿಯಬೇಕು. ಆರಂಭದಲ್ಲಿ ಹೇಗೆ ಜಪ ಮಾಡಿದರೂ ಸರಿ, ಆದರೆ ಕ್ರಮೇಣ ಜಪದಲ್ಲಿ ಏಕಾಗ್ರತೆ ಬರಲೇಬೇಕು. ಆಗ ಮಾತ್ರ ಭಗವಂತನ ಕೃಪೆಯಾಗುತ್ತದೆ. ಆರಂಭದಲ್ಲಿ ಜಪವೇ ಬೇರೆ, ದಿನದಿನದ ಜೀವನವೇ ಬೇರೆಯಾಗಿರುತ್ತದೆ, ಆದರೆ ಮುಂದುವರಿದಂತೆ ಕ್ರಮ ಕ್ರಮೇಣ ದಿನದಿನದ ಎಲ್ಲ ಕ್ಷಣಗಳನ್ನು ಜಪವೇ ತುಂಬಿಕೊಳ್ಳುವಂತಾಗಬೇಕು. **''ಜಪತೋ ನಾಸ್ತಿ ಪಾತಕಮ್''** ಅಂತಹ ಜಪಶೀಲ ಸಾಧಕನಿಂದ ಪಾಪ ನಡೆಯಲು ಸಾಧ್ಯವಿಲ್ಲ. ಆರಂಭದಲ್ಲಿ ಜಪಸಂಖ್ಯೆ, ಜಪಕ್ಕೆ ನಿಶ್ಚಿತ ಸಮಯ ಎಲ್ಲ ಬೇಕು, ಆದರೆ ಮುಂದುವರಿದಂತೆ ಉಸಿರು ಉಸಿರಿಗೂ ಹರಿಯನ್ನೇ ನೆನೆಯುವಂತಾಗಬೇಕು.



ಶ್ರೀಮಾತೆಯವರು ಜಪಕ್ಕೆ ಅತ್ಯಧಿಕ ಪ್ರಾಮುಖ್ಯತೆಯನ್ನು ನೀಡಿದರು. ಹಾಗೆಂದು ಜ್ಞಾನಯೋಗ, ರಾಜಯೋಗ ಇನ್ನಿತರ ಸಾಧನೆಗಳಲ್ಲಿ ಆಸಕ್ತಿ ಉಳ್ಳವರನ್ನು ಅಲ್ಲಗಳೆಯಲಿಲ್ಲ, ನಿರುತ್ಸಾಹಗೊಳಿಸಲಿಲ್ಲ. ಶ್ರೀ ರಾಮಕೃಷ್ಣರು ಹೇಗೆ ''ನಾನು ಒಂದು ವಾದ್ಯವನ್ನು ಬೊ ಎಂದು ಊದುವವನಲ್ಲ, ನಾನು ನಾನಾ ರಾಗರಾಗಿಣಿಗಳನ್ನು ಊದುವವನು'' ಎಂದು ಹೇಳಿದ್ದರೋ ಅದೇ ರೀತಿ ಶ್ರೀಮಾತೆಯವರೂ ಎಲ್ಲ ಸಾಧನಾಮಾರ್ಗಗಳಿಗೂ ಮಾನ್ಯತೆಯನ್ನು ನೀಡಿದವರಾಗಿದ್ದರು. ಅವರ ದೃಷ್ಟಿ ಉದಾರವಾಗಿತ್ತು, ಪರಮಸಹಿಷ್ಣುವಾಗಿತ್ತು.

ಒಬ್ಬ ಶ್ರೀಮಂತನ ಮನೆಯ ದೇವರ ಕೋಣೆಯಲ್ಲಿ ಮಂತ್ರ ಜಪದ ಕ್ಯಾಸೆಟನ್ನು ೨೪ ಗಂಟೆ ಹಾಕಲಾಗುತ್ತಿತ್ತು. ಅವನ ಮಿತ್ರನೊಬ್ಬ ಅವನಿಗೆ, ''ಆ ರೀತಿ ಕ್ಯಾಸೆಟ್ ಹಾಕುವುದರಿಂದ ನಿನಗೆ ಏನಾದರೂ ಲಾಭವಿದೆಯೆ?'' ಎಂದು ಕೇಳಿದನು. ಆಗ ಅವನು, ''ಹೌದು ಅದೊಂದು ರಾತ್ರಿ ಕಳ್ಳರು ಬಂದಿದ್ದರು. ಅವರು ಅದಾರೋ ಮಂತ್ರ ಜಪಿಸುತ್ತ ಎಚ್ಚರವಾಗಿದ್ದಾರೆ ಎಂದು ಮನೆಗೆ ಕನ್ನವನ್ನು ಹಾಕಲಿಲ್ಲ'' ಎಂದನು. ಅದೇ ರೀತಿ ಯಾರ ಹೃದಯಮಂದಿರದಲ್ಲಿ ನಿರಂತರ ನಾಮಜಪ ನಡೆಯುತ್ತಿರುತ್ತದೆಯೋ ಅಲ್ಲಿ ಕಾಮಾದಿ ಷಡ್‌ರಿಪುಗಳು ಕಳ್ಳತನವನ್ನು ಮಾಡುವುದಿಲ್ಲ.

ಆದ್ದರಿಂದ ಶ್ರೀಮಾತೆಯವರು ಹೇಳುತ್ತಾರೆ, ಜಪವನ್ನು ಮಾಡಬೇಕು, ಜಪವನ್ನು ಲಕ್ಷ್ಯಕೊಟ್ಟು ಮಾಡಬೇಕು. ಜಪದ ಕುರಿತು ಅವರಿಗೆ ಅದೆಷ್ಟು ಭರವಸೆಯೆಂದರೆ, ಅವರು ಹೇಳುತ್ತಾರೆ, ''ಮೊದಲು ಜಪವನ್ನು ಮಾಡಲಿ, ಅದು ಫಲಕಾರಿಯಾಗದಿದ್ದರೆ, ಅನಂತರ ಬಂದು ನನ್ನನ್ನು ಕೇಳಲಿ. ಆದರೆ ಜನ ಜಪವನ್ನು ಮಾಡುವುದಿಲ್ಲ, ಮತ್ತೆ ಬಹಳಷ್ಟು ಪ್ರಶ್ನೆ ಸಂಶಯಗಳನ್ನು ಕೇಳುತ್ತಾರೆ.

''ಆದ್ದರಿಂದ ಗುರು ಉಪದೇಶಿಸಿದ ಮಂತ್ರವನ್ನು ಪ್ರತಿದಿನ ಜಪ ಮಾಡಲೇಬೇಕು. ಒಂದು ದಿನವಾದರೂ ಜಪ ಮಾಡದೆ ಇರುವುದು ಒಳ್ಳೆಯದಲ್ಲ. ನೀನು ಪಡೆದ ಉಪದೇಶ, ಶ್ರೀರಾಮಕೃಷ್ಣರ ನಾಮ ಕೇವಲ ಟೊಳ್ಳು ಶಬ್ದ ಎಂದು ತಿಳಿದುಕೊಂಡೆಯಾ? ಆ ನಾಮ ಎಂದಿಗೂ ವ್ಯರ್ಥವಾಗುವುದೇ ಇಲ್ಲ. ಯಾರುಯಾರು ಶ್ರೀ ರಾಮಕೃಷ್ಣರಲ್ಲಿ ನೆಟ್ಟ ಮನಸ್ಸುಳ್ಳವರಾಗಿ ಇರುತ್ತಾರೆಯೋ ಅವರಿಗೆ ಇಷ್ಟ ದರ್ಶನ ಆಗಿಯೇ ಆಗುತ್ತದೆ.''

# ಸ್ವಾಮೀಜಿ ಕೃತಿಗಳಲ್ಲಿ ಮಂತ್ರ, ಭಗವನ್ನಾಮಗಳನ್ನು ಕುರಿತು

**ಕೆ.ಆರ್.ಮೋಹನ್**



"ನಾನು ಸ್ವಾಮಿ ವಿವೇಕಾನಂದರ ಜತೆ ಇದ್ದಾಗ ಕಂಡ ಸತ್ಯವಿದು. ಅವರು ಪ್ರತಿ ದಿನ ರಾತ್ರಿ ಒಂಬತ್ತು ಗಂಟೆಗೆ ಧ್ಯಾನಕ್ಕೆ ಕುಳಿತರೆ, ಬೆಳಗಿನ ಜಾವ ಐದು ಗಂಟೆಗೆ ಏಳುತ್ತಿದ್ದರು. ಧ್ಯಾನಕ್ಕೆ ಕುಳಿತಾಗ ಒಂದು ಕಂಬಳಿಯನ್ನು ಹೊದ್ದುಕೊಂಡಂತೆ ಸೊಳ್ಳೆಗಳು ಅವರ ಶರೀರದ ಮೇಲೆಲ್ಲಾ ಕುಳಿತಿರುತ್ತಿದ್ದವು ಮನಸ್ಸು ಇಂದ್ರಿಯಗಳ ಸಂಪೂರ್ಣ ನಿಗ್ರಹ ಮತ್ತು ಮನಸ್ಸಿನ ಪ್ರಶಾಂತತೆ ಲಕ್ಷಣಗಳೊಡನೆ ಸಾಕ್ಷಾತ್ ಶಿವನಂತೆ ಕಂಗೊಳಿಸುತ್ತಿದ್ದರು." ಎಂದು ಸ್ವಾಮಿ ತುರೀಯಾನಂದರು ತಮ್ಮ ಗುರುಭಾಯಿ ಹಾಗೂ ಧ್ಯಾನಸಿದ್ಧ ವಿವೇಕಾನಂದರ ಬಗ್ಗೆ ಹೇಳಿದ್ದರು.

ಸ್ವಾಮೀಜಿ ಧ್ಯಾನದ ಬಗ್ಗೆ ಬಹಳ ವಿವರವಾಗಿ ಹಾಗೂ ವಿಸ್ತಾರವಾಗಿ ಹಲವಾರು ಪ್ರವಚನಗಳಲ್ಲಿ ಹೇಳಿದ್ದಾರೆ. ಆದರೆ ಮಂತ್ರ ಮತ್ತು ಭಗವನ್ನಾಮದ ಬಗ್ಗೆ ಪ್ರಾಸಂಗಿಕವಾಗಿ ಆಗಾಗ ಹೇಳಿದ್ದನ್ನು ಸಂಗ್ರಹಿಸಿ ಈ ಲೇಖನಗಳಲ್ಲಿ ಕೊಡಲಾಗಿದೆ.

**ಮಂತ್ರದೀಕ್ಷೆ:** ಪರಿವ್ರಾಜಕರಾಗಿದ್ದಾಗ, ಸ್ವಾಮೀಜಿ ಒಂದು ವಾರ ತಮ್ಮ ಹಳೆಯ ಪರಿಚಯದ ಹರಿದಾಸ ಚಟರ್ಜಿ ಮನೆಯಲ್ಲಿ ತಂಗಿದ್ದರು. ಅಲ್ಲಿಂದ ಹೊರಡುವ ಹಿಂದಿನ ರಾತ್ರಿ, ಹರಿದಾಸನು ಸ್ವಾಮೀಜಿಯವರ ಪಾದಗಳನ್ನು ಬಿಗಿಯಾಗಿ ಹಿಡಿದು ತನಗೆ ಮಂತ್ರೋಪದೇಶ ನೀಡುವಂತೆ ಕೇಳಿಕೊಂಡ. ಆದರೆ ಸ್ವಾಮೀಜಿ ಅವನಿಗೆ ಮಂತ್ರೋಪದೇಶ ನೀಡಲಿಲ್ಲ. ಸ್ವಾಮೀಜಿ ಸ್ವಭಾವತಃ ಅತ್ಯಂತ ಧರ್ಮಾರ್ಥರು. ಹೀಗಿದ್ದೂ ದೀಕ್ಷೆ ಕೊಡಲಿಲ್ಲವೆಂದರೆ ಒಂದೇ ಒಂದು ಕಾರಣ ಊಹಿಸಬಹುದು. ಅದೇನೆಂದರೆ, ಹರಿ ದಾಸನು ಸ್ವಾಮೀಜಿಯವರ ವಲಯಕ್ಕೆ ಸೇರಿದವನಲ್ಲ. ತಮ್ಮ ಅಂತರ್ದೃಷ್ಟಿಯಿಂದ ಈ ವಿಚಾರವನ್ನು ಸ್ವಾಮೀಜಿ ಕಂಡುಕೊಂಡಿರಬೇಕು. ಹೀಗೆ ಗುರು ಶಿಷ್ಯ ಸಂಬಂಧವೆನ್ನುವುದು ತುಂಬಾ ಸೂಕ್ಷ್ಮವಾದದ್ದು.

ಆಧ್ಯಾತ್ಮಿಕ ಅನುಭವ ಹಾಗೂ ಶಾಸ್ತ್ರಜ್ಞಾನ ಇವೆರಡರ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ಸಾಧಕರಿಗೆ ನೀಡಿರುವ ದಾರ್ಶನಿಕ ವಿಚಾರಗಳು ಎಲ್ಲ ಕಾಲಕ್ಕೂ ಉಪಯುಕ್ತವಾದ ಹೊಳಹುಗಳನ್ನು ನೀಡುತ್ತವೆ. ಈ ಕುರಿತು ವಿಶ್ಲೇಷಿಸಿರುವ ಲೇಖಕರು ನಿವೃತ್ತ ಬ್ಯಾಂಕ್ ಅಧಿಕಾರಿಗಳು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಇವರ ಅನೇಕ ಲೇಖನಗಳು 'ವಿವೇಕಪ್ರಭ'ದಲ್ಲಿ ಪ್ರಕಟವಾಗಿವೆ.

ಒಮ್ಮೆ ಸ್ವಾಮೀಜಿಯವರ ಶಿಷ್ಯ ಪ್ರಿಯನಾಥ್ ಸಿನ್ಹ ಒಂದು ಪ್ರಶ್ನೆ ಕೇಳಿದ:

**ಪ್ರಶ್ನೆ:** ನೀವು ಪಾಶ್ಚಾತ್ಯರಿಗೆ ಮಂತ್ರದೀಕ್ಷೆ ಹೇಗೆ ಕೊಟ್ಟಿರಿ? ಶಾಸ್ತ್ರಗಳಲ್ಲಿ ಬ್ರಾಹ್ಮಣರ ಹೊರತು ಮತ್ತಾವ ಶೂದ್ರರಿಗೆ ಪ್ರಣವ ಮಂತ್ರೋಚ್ಚಾರಣೆಯ ಅಧಿಕಾರವಿಲ್ಲವೆಂದು ಹೇಳಿದೆ. ಅಲ್ಲದೆ ಪಾಶ್ಚಾತ್ಯರು ಶೂದ್ರರು ಕೂಡ ಅಲ್ಲ ಮ್ಲೇಚ್ಛರು.

**ಸ್ವಾಮೀಜಿ:** ನನ್ನ ಶಿಷ್ಯರೆಲ್ಲಾ ಬ್ರಾಹ್ಮಣರು. ಬಾಹ್ಮಣ ಜಾತಿ ಮತ್ತು ಬ್ರಾಹ್ಮಣ ಗುಣಗಳು ಎರಡೂ ಭಿನ್ನವಾದ ವಿಷಯಗಳು. ಭರತಖಂಡದಲ್ಲಿ ಜಾತಿಯಿಂದ ಬ್ರಾಹ್ಮಣರೆಂದು ನಿಷ್ಕರ್ಷಿಸುವರು. ಪಶ್ಚಿಮದಲ್ಲಿ ಬ್ರಾಹ್ಮಣ ಗುಣಗಳಿಂದ ಬ್ರಾಹ್ಮಣರೆಂದು ಗುರುತಿಸಬೇಕು. ಬ್ರಾಹ್ಮಣ ಪದವಿಗೆ ಅರ್ಹತೆ ಪಡೆದಿರುವವರೂ ಅಲ್ಲಿ ಅನೇಕರಿದ್ದಾರೆ.

ಒಮ್ಮೆ ಸ್ವಾಮೀಜಿ ಬೇಲೂರು ಮಠದಲ್ಲಿ ತಮ್ಮ ಇಬ್ಬರು ಶಿಷ್ಯರನ್ನು ಅಂದರೆ ವಿರಜಾನಂದ ಹಾಗೂ ಪ್ರಕಾಶಾನಂದರನ್ನು ದೀಕ್ಷೆ ನೀಡಲು ಪೂಜಾಗೃಹಕ್ಕೆ ಕರೆದುಕೊಂಡು ಹೋದರು. ಅಲ್ಲಿ ಮೂವರೂ ಧ್ಯಾನಕ್ಕೆ ಕುಳಿತುಕೊಂಡರು. ಸ್ವಾಮೀಜಿ ಗಾಢ ಧ್ಯಾನದಲ್ಲಿ ಲೀನರಾದರು. ಸ್ವಲ್ಪ ಹೊತ್ತಿನ ಮೇಲೆ ಆ ಸ್ಥಿತಿಯಿಂದ ಹೊರಬಂದು ಗಂಭೀರ ದನಿಯಲ್ಲಿ ನುಡಿದರು: "ಈಗ ನಾನು ನಿಮ್ಮಲ್ಲಿ ಶಕ್ತಿ ಸಂಚಾರ ಮಾಡುತ್ತೇನೆ. ನನ್ನ ಶಕ್ತಿಯನ್ನು ನಿಮ್ಮಲ್ಲಿ ಹರಿಸಬಯಸುತ್ತೇನೆ." ಅನಂತರ ವಿಧ್ಯುಕ್ತವಾಗಿ ಮಂತ್ರದೀಕ್ಷೆ ನೀಡಿದರು. ನಂತರ ಶಿಷ್ಯರಿಗೆ ಹೇಗೆ ಆಧ್ಯಾತ್ಮಿಕ ತತ್ತ್ವಗಳನ್ನು ಬೋಧಿಸಬೇಕು, ಮಂತ್ರೋಪದೇಶವನ್ನು ನೀಡುವ ಬಗೆ ಹೇಗೆ ಎಂದು ತಿಳಿಸಿಕೊಟ್ಟರು. ಬಳಿಕ ಆ ಇಬ್ಬರು ಶಿಷ್ಯರನ್ನೂ ಢಾಕಾ ಕಡೆ ಕಳುಹಿಸಿದರು.

ತಮ್ಮ ಸೋದರ ಸಂನ್ಯಾಸಿಗಳಾದ ಸ್ವಾಮಿ ಶಾರದಾನಂದ ಹಾಗೂ ಸ್ವಾಮಿ ತುರೀಯಾನಂದರಿಗೆ ಮಂತ್ರೋಪದೇಶ ನೀಡುವ ಅಧಿಕಾರ ಕೊಟ್ಟು, ಗುಜರಾತ್ ಪ್ರದೇಶದಲ್ಲಿ ಧರ್ಮಪ್ರಸಾರ ಮಾಡಲು ಸ್ವಾಮೀಜಿ ಕಳುಹಿಸಿಕೊಟ್ಟರು.